Tumbe International e-Magazine
ISSN : 2581-7728
A Multilanguage Magazine
Issue-2
Volume-3
July-Dec: 2020

# ಮಾನವೀಯತೆಯೇ ಧರ್ಮ ದಯವೇ ಅದರ ಮೂಲ

**ಹುಸೇನಸಾಬ ವಣಗೇರಿ,**
ಸಂಶೋಧನಾ ವಿದ್ಯಾರ್ಥಿ,
ಸಮಾಜ ಕಾರ್ಯ ಅಧ್ಯಯನ ವಿಭಾಗ,
ಕ.ವಿ.ವಿ. ಧಾರವಾಡ.
ಮೊಬೈಲ್ ಸಂಖ್ಯೆ: 7829606194
ಈಮೇಲ್: husenasabvanageri@gmail.com

ನಮ್ಮ ಭಾರತ ದೇಶದಲ್ಲಿ ವಿವಿಧ ಸಂಸ್ಕೃತಿಯ, ವಿವಿಧ ಧರ್ಮಗಳ ಜನರು ವಾಸ ಮಾಡುತ್ತಿದ್ದಾರೆ. ಬಹುಶಃ ಎಲ್ಲರ ಮನಸ್ಸಿನಲ್ಲೂ ಉತ್ತರ ಸಿಗದ ಪ್ರಶ್ನೆಯೊಂದು ಇದೆ ಎಂದರೆ ಅದು ಧರ್ಮ ಎಂದರೆ ಯಾವುದು? ಎನ್ನುವುದೇ ಇರಬಹುದೇನೋ ಎನ್ನುವುದು ನನ್ನ ಅಭಿಪ್ರಾಯ. ಏಕೆಂದರೆ ಧರ್ಮರದ ಒಳ ಅರ್ಥವನ್ನು ಅರ್ಥೈಸಿಕೊಳ್ಳದೇ ಹಿಂದೂ, ಮುಸ್ಲಿಂ, ಕ್ರೈಸ್ತ ಎಂಬ ಭೇದಭಾವಗಳಿಂದ ಕೋಮುಗಲಭೆಗಳಿಗೆ, ಹಿಂಸಾಚಾರಗಳಿಗೆ ಎಡೆಮಾಡಿಕೊಡುತ್ತಿದ್ದೇವೆ. ಮಾನವ ಯಾವುದನ್ನು ಪವಿತ್ರ ಭಾವನೆಯಿಂದ ನೋಡುವನೋ ಅದರೊಡನೆ ಇರಿಸಿಕೊಳ್ಳುವ ಸಂಬಂಧವೇ ಧರ್ಮವೆಂಬ ಶಬ್ದದ ವಿಶಾಲಾರ್ಥ. ಭಾರತೀಯ ಉಪಖಂಡದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧ ಧರ್ಮಗಳಾಗಿದೆ ವಿಂಗಡಿಸಿಕೊಂಡಿರಬಹುದು ಆದರೆ ಎಲ್ಲಾ ಧರ್ಮಗಳೂ ಮಾನವೀಯತೆಯ ಆಧಾರದ ಮೇಲಿರುವುದರಿಂದ ಧರ್ಮವೆಂದರೆ ಸಮಾನತೆ, ಧರ್ಮವೆಂದರೆ ಮಾನವೀಯತೆ ಎಂದರೆ ತಪ್ಪಾಗಲಾರದು. ಶಿವಕುಮಾರ ಸ್ವಾಮೀಜಿಯವರ ಮಾತಿನಂತೆ ಪ್ರಂಪಂಚದಲ್ಲಿ ಧರ್ಮ ಯಾವುದು ಎಂದರೆ ಒಂದೇ ಧರ್ಮ ಅದು ಮನುಷ್ಯ ಧರ್ಮ, ಕತ್ತಲಲ್ಲಿ ಇರುವವನನ್ನು ಬೆಳಕಿಗೆ ತರುವುದು, ಬಾಯಾರಿದವನಿಗೆ ನೀರುಣಿಸುವದು, ಮತ್ತೊಬ್ಬರ ಕಷ್ಟಕ್ಕೆ ನೆರವಾಗುವುದು ಧರ್ಮ. ಪರಂತು ಧರ್ಮ ಗುಡಿ ಗುಂಡಾರಗಳಲ್ಲಿ ನೆಲೆಸಿಲ್ಲ ಎನ್ನುವ ಸತ್ಯಾಂಶವನ್ನು ಅರಿತುಕೊಳ್ಳಬೇಕಿದೆ.

ಸಂಸ್ಕೃತಿ, ಸಂಪ್ರದಾಯ, ಶಿಷ್ಟಾಚಾರಗಳಿಗೆ ಹೆಸರಾದ ನಮ್ಮ ಈ ದೇಶದಲ್ಲಿ ಹುಟ್ಟಿದ, ಇಲ್ಲಿಯೇ ಬೆಳೆದ ವ್ಯಕ್ತಿಗಳನ್ನು ಅನುಸರಿಸುತ್ತಾ, ವ್ಯಯಕ್ತಿಕ ಬದುಕಿನಲ್ಲಿ ವಿಶಿಷ್ಟತೆಯನ್ನು ಕಾಯ್ದುಕೊಂಡು ಬೆಳೆದು ಬಂದ ಭಾರತೀಯರಲ್ಲಿ ಹಿಂದೂ ಧರ್ಮ ಮಹೋನ್ನತವಾದ ಸ್ಥಾನವನ್ನು ಪಡೆದುಕೊಂಡಿದೆ. ಭಾರತದಲ್ಲಿ ವೈದಿಕ ಧರ್ಮ ಇತ್ತು ಎಂಬುದು, ಸನಾತನ ಧರ್ಮ ಇತ್ತು ಎಂಬುದು, ಚಾತುರ್ವರ್ಣ ಧರ್ಮ ಇತ್ತು ಎಂಬುದು, ಮನುಧರ್ಮ ಇತ್ತು ಎಂಬುದು ವೇದಗಳೇ ವೈದಿಕ ಧರ್ಮದ ಆಧಾರಗಳೆಂದು ಪ್ರಾಚೀನ ಕಾಲದ ಋಷಿಮುನಿಗಳು ಇವುಗಳ ರಚನೆಕಾರರು, ಈ ಧರ್ಮ ಸಂಸ್ಥಾಪಕರು ಎಂಬ ಚಿಂತನೆಗಳಿವೆ. ವೇದಗಳೇ ಸತ್ಯವೆಂಬ ಮಾತೂ ಇದೆ. ಯಜ್ಞ ಯಾಗಾದಿಗಳನ್ನು ಮಾಡುತ್ತಾ ಪ್ರಜೇಗಳಿಗೆ ಮಾರ್ಗದರ್ಶಕರಾಗಿ ಮುನಿಗಳು ವೈದಿಕ ಧರ್ಮದ ಕರ್ತೃಗಳು ಎಂಬುವುದು ಬಹುತೇಕ ಭಾರತೀಯರ ನಂಬಿಕೆ. ಭಾರತೀಯ ಅರಸೊತ್ತಿಗೆಯ ರಾಜ್ಯಾಡಳಿತ ಕಾಲದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ಜನ ಸಮುದಾಯಗಳ ಸಂಘಟನೆಯಲ್ಲಿ ಬೆಳೆಯಿತು ಈ ಸನಾತನ ಧರ್ಮ.

ಧರ್ಮವು ದೇವರನ್ನು ಹುಡುಕುವ ಮಾರ್ಗವಲ್ಲ. ಆದರೆ ಧರ್ಮ ಇದ್ದಲ್ಲಿ ದೇವರು ನೆಲೆಸಿರುತ್ತಾನೆ ಧರ್ಮ ಸ್ಥಾಪನೆಗಾಗಿ ಪರಮಾತ್ಮ ಕಾಲಕಾಲಕ್ಕೆ ಆವತರಿಸುತ್ತಾನೆ ಎಂದು ಭಾರತೀಯ ದರ್ಶನ ಹೇಳುತ್ತದೆ. "ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ... ಸಂಭವಾಮಿ ಯುಗೇ ಯುಗೇ ಎಂದು ಗೀತೆ ಶ್ರೀ ಕೃಷ್ಣ ಪರಮಾತ್ಮನೇ ಹೇಳಿದ್ದಾನೆ ಇದರರ್ಥ ಧರ್ಮವು ಭಗವಂತನಿಗೆ ಅತ್ಯಂತ ಪ್ರಿಯವಾದದ್ದು ಎಂದರ್ಥ. ದೇವರಲ್ಲಿ ನಂಬಿಕೆ ಇಲ್ಲದವರಿಗೂ ಧರ್ಮ ಕಡ್ಡಾಯ ಸ್ವತಃ ದೇವರಿಗೂ ಕಡ್ಡಾಯವೆಂಬುದು ಉಲ್ಲೇಖವಿದೆ.

ನಡೆದಾಡುವ ವಿಶ್ವಕೋಶವೆಂದೇ ಪ್ರಸಿದ್ದರಾದ ಡಾ. ಶಿವರಾಮ ಕಾರಂತರವರು ಧರ್ಮ ಎಂದರೆ ಆದರ್ಶ ನಡುವಳಿಕೆ ಎಂದಿದ್ದಾರೆ ಅದನ್ನರಿತು ಇನ್ನೊಬ್ಬರಿಗೆ ನೋವನ್ನುಂಟು ಮಾಡದೆ ಮಾನವೀಯ ಮೌಲ್ಯಗಳನ್ನು ಅರಿತು ಜೀವನ ನಡೆಸಬೇಕಿದೆ. ವೈವಿಧ್ಯತೆಯಿಂದ ಕೂಡಿದ ಈ ರಾಷ್ಟ್ರದಲ್ಲಿ ಹಲವಾರು ಧರ್ಮ, ಭಾಷೆಯ ಜನರಿದ್ದಾರೆ. ಇಂದಿನ ದಿನಮಾನದಲ್ಲಿ ಧರ್ಮದ ಹೆಸರಿನಲ್ಲಿ ಅಧರ್ಮ ತಾಂಡವಾಡುತ್ತಿದೆ. ಧರ್ಮ ಧರ್ಮಗಳ ಮಧ್ಯ ಕಲಹ, ಧರ್ಮದ ಹೆಸರಿನಲ್ಲಿ ಬೇರೆ ಧರ್ಮದವರಿಗೆ ಹಿಂಸೆ, ದಬ್ಬಾಳಿಕೆ, ಶೋಷಣೆ ನಡೆಯುತ್ತಿರುವುದು ಶೋಚನೀಯ ಸಂಗತಿ. ಇದು ಮಧ್ಯಕಾಲೀನ ದೆಹಲಿ ಸುಲ್ತಾನರ ಕಾಲದಿಂದಲೂ ನಡೆಯುತ್ತಲೇ ಬಂದಿದೆ.

ಇಂತಹ ಸಮಾಜದಲ್ಲಿನ ತಪ್ಪುಗಳನ್ನು, ಮೌಢ್ಯಗಳನ್ನು ತಿದ್ದಿ ಸರಿಪಡಿಸುವ ನಿಟ್ಟಿನಲ್ಲಿ ಹನ್ನೆರಡನೇಯ ಶತಮಾನದಿಂದಲೂ ಮಹಾನ್ ವ್ಯಕ್ತಿಗಳು ಶ್ರಮಿಶಿದ್ದಾರೆ. ವಿಶ್ವ ಗುರು ಬಸವಣ್ಣನವರು ದಯವೇ ಧರ್ಮದ ಮೂಲ ಎಂದು ಸಾರಿ ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕೆ ತಮ್ಮದೇಯಾದ ಕೊಡುಗೆ ನೀಡಿದ್ದಾರೆ. ಮಾತು ಮನಸ್ಸು ಮತ್ತು ಕರ್ಮಗಳಿಂದ ಯಾವ ಜೀವಿಗೂ ನೋವನ್ನುಂಟು ಮಾಡದಿರುವುದು ದುಃಖಿಗಳ ದುಃಖಗಳನ್ನು ಕಂಡು ಮರುಗುವುದಲ್ಲದೇ ಅವರ ದುಃಖಗಳನ್ನು ದೂರ ಮಾಡಲು ನಮ್ಮ ಶಕ್ತಿಯನ್ನು ಮೀರಿ ಪ್ರಯತ್ನಿಸುವುದು ದಯೆ ಎಂದೆನಿಸುತ್ತದೆ. ಒಂದು ವೇಳೆ ಅಂಥ ಧರ್ಮ ಇದ್ದರೂ ಅದು ಪ್ರಯೋಜನಕಾರಿಯಾದ ಧರ್ಮವಲ್ಲ. ಈ ಕಾರಣಕ್ಕಾಗಿಯೇ ಬಸವಣ್ಣನವರು ದಯವಿಲ್ಲದೆ ತಾವು ಧರ್ಮಿಯರೆಂದು ಬಡಾಯಿ ಕೊಚ್ಚಿಕೊಳ್ಳುವರನ್ನು ಭಗವಂತ ಮೆಚ್ಚಲಾರನು ಆದ್ದರಿಂದ ದಯವೇ ಧರ್ಮದ ಮೂಲ ಎಂದು ಅವರ ಸ್ಪಷ್ಟತೆನ್ನು ಅರಿತುಕೊಳ್ಳವ ಅಗತ್ಯತೆಯಿದೆ.

"ಮಜಹಬ ನಹೀಂ ಸಿಖಾತಾ ಆಪಸಮೆ ವೈರ ರಖ'ನಾ ಎಂಬ ಕವಿವಾಣಿ ಬದುಕಿನ ಸೂತ್ರವಾಗಬೇಕು. ಏಕೆಂದರೆ ಜೀವಿಯೇ ಮತ್ತೊಂದು ಜೀವಿಯ ಸಹಾಯಕ್ಕೆ ಬರಲು ಸಾಧ್ಯ. ಆದ್ದರಿಂದ ವೈರವನ್ನು ಸಾಧಿಸದೇ ಜೀವಿಗಳಲ್ಲಿ ದಯಾವುಳ್ಳವರಾಗಬೇಕು. ಅದುವೇ ನಿಜವಾದ ಧರ್ಮ ಇದೆಲ್ಲವನ್ನು ನಾವೆಲ್ಲರೂ ಅರಿತುಕೊಂಡು ಸೋದರತೆಯ ಮನೋಭಾವನೆಯಿಂದ ನಾವು ನಮ್ಮವರು ಎಂದು ಬದುಕಬೇಕಿದೆ. ಧರ್ಮ ಎಂದರೆ ಹಿಂದೂ ಅಲ್ಲ, ಮುಸ್ಲಿಂ ಅಲ್ಲ, ಬದಲಿಗೆ ಕ್ರೈಸ್ತರೂ ಅಲ್ಲ ಎಲ್ಲಾ ಧರ್ಮಗಳೂ ಹೇಳುವುದೊಂದೆ. ಧರ್ಮ ಎಂದರೆ ನೀನು ಹಸಿದಾಗ ತಿನ್ನುತ್ತಿರುವ ಸ್ವಲ್ಪವೇ ಆಹಾರದಲ್ಲಿ ನಿನಗಿಂತ ಹಸಿದಿರುವ ಒಂದು ಪ್ರಾಣಿಯಾಗಲಿ, ಮನುಷ್ಯನಿಗಾಗಲಿ ಅಥವಾ ಜೀವಿಗಾಗಲಿ ಸ್ವಲ್ಪ ಹಂಚಿ ತಿನ್ನುವುದೇ ನಿಜವಾದ ಧರ್ಮ ಎನ್ನುವುದನ್ನು ತಿಳಿದು ಬದುಕಬೇಕಿದೆ ಹೊರತು ಅಜ್ಞಾನ, ಅಧಂಕಾರದಲ್ಲಿ ಮುಳುಗಿ ಧರ್ಮದ ಹೆಸರಿನಲ್ಲಿ ಸಮಾಜಬಹಿರ ಕೃತ್ಯಗಳಲ್ಲಿ ತೊಡಗಿಕೊಳ್ಳವುದಲ್ಲಿ ಎನ್ನುವುದಕ್ಕೆ ಅರಿತು ಬಾಳಬೇಕಿದೆ ಮಾನವೀಯತೆಯ ಧರ್ಮ ದಯವೇ ಅದರ ಮೂಲ ಎಂದು ತಿಳಿಯಬೇಕಿದೆ.